**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹೊನ್ನಾವರ.**

**ಸಿ.ಸಿ. ನಂ.640/2025.**

ಪಿರ್ಯಾದುದಾರರುಃ- ಮಂಕಿ ಪೊಲೀಸ್ ಠಾಣೆ ,
ಮಂಕಿ,
ತಾಲೂಕುಃ- ಹೊನ್ನಾವರ (ಉ.ಕ.).

**- ವಿರುದ್ಧ -**

ಆರೋಪಿತರುಃ-

1. ದುರ್ಗಯ್ಯ ಅಚ್ಚಲಗುಂಡಿ ನಾಯ್ಕ,
ಪ್ರಾಯ ಸುಮಾರುಃ- 64 ವರ್ಷ,
ವೃತ್ತಿಃ- ರೈತ,
ಸಾಕೀನಃ- ಮಂಕಿ, ಖಾಜಿಮನೆ,
ತಾಲೂಕುಃ- ಹೊನ್ನಾವರ.

2. ಈಶ್ವರ ದುರ್ಗಯ್ಯ ನಾಯ್ಕ,
ಪ್ರಾಯ ಸುಮಾರುಃ- 29 ವರ್ಷ,
ವೃತ್ತಿಃ- ಹೋಟೆಲ್ ಕೆಲಸ,
ಸಾಕೀನಃ- ವಂಕಿ, ಖಾಜಿಮನೆ,
ತಾಲೂಕುಃ ಹೊನ್ನಾವರ,
ಹಾಲಿಃ ವೀರಭದ್ರಗಲ್ಲಿ,
ತಾಲೂಕುಃ- ಶಿರಸಿ.

3. ಸುಮಿತ್ರಾ ಕೋಂ ದುರ್ಗಯ್ಯ ನಾಯ್ಕ,
ಪ್ರಾಯ ಸುಮಾರುಃ- 62 ವರ್ಷ,
ವೃತ್ತಿಃ- ಕೂಲಿ ಕೆಲಸ,
ಸಾಕೀನಃ- ಮಂಕಿ, ಖಾಜಿಮನೆ,
ತಾಲೂಕುಃ- ಹೊನ್ನಾವರ.

4. ಗೀತಾ ಕೋಂ ಅಶೋಕ ನಾಯ್ಕ,
ಪ್ರಾಯ ಸುಮಾರುಃ- 38 ವರ್ಷ,
ವೃತ್ತಿಃ- ಮನೆ ಕೆಲಸ,
ಸಾಕೀನಃ- ಮಂಕಿ ಕುಬಾರಕೇರಿ,
ತಾಲೂಕುಃ- ಹೊನ್ನಾವರ.
ಹಾಲಿಃ ವೀರಭದ್ರಗಲ್ಲಿ,
ತಾಲೂಕುಃ ಶಿರಸಿ.

5. ಅಶೋಕ ಓಮಯ್ಯ ನಾಯ್ಕ,
ಪ್ರಾಯ ಸುಮಾರುಃ- 46 ವರ್ಷ,
ವೃತ್ತಿಃ- ಹೋಟೆಲ್ ಕೆಲಸ,
ಸಾಕೀನಃ- ಮಂಕಿ, ಕುಂಬಾರಕೇರಿ,
ತಾಲೂಕುಃ- ಹೊನ್ನಾವರ.
ಹಾಲಿಃ ವೀರಭದ್ರಗಲ್ಲಿ,
ತಾಲೂಕುಃ ಶಿರಸಿ.

*****

## ದೋಷಾರೋಪಣೆ

ಶ್ರೀ ಅನಿಲ್ ಜೋನ್ ಸಿಕ್ವೇರಾ., ಬಿ.ಬಿ.ಎ.,ಎಲ್.ಎಲ್.ಬಿ., ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾಯಿಕ ದಂಡಾಧಿಕಾರಿಯಾದ ನಾನು ಆರೋಪಿತರಾದ ನಿಮ್ಮ ಮೇಲೆ ಈ ಕೆಳಕಂಡ ದೋಷಾರೋಪಣೆಯನ್ನು ಹೊರಿಸುತ್ತಿದ್ದೇನೆ.

ಮಂಕಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಮಂಕಿಯ ಖಾಜಿಮನೆಯಲ್ಲಿರುವ ಫಾರೆಸ್ಟ ಸರ್ವೆ ಸಂಖ್ಯೆ: 238 ಅ/1 ನೇದರಲ್ಲಿರುವ ಮಣ್ಣಿನ ರಸ್ತೆಯ ಮೇಲೆ ದಿನಾಂಕಃ 08-12-2024 ರಂದು ಬೆಳಿಗ್ಗೆ 10-00 ಗಂಟೆಯ ಸುಮಾರಿಗೆ ಪಿರ್ಯಾದಿಯವರು ಬೇಲಿ ಕೆಲಸ ಮಾಡುತ್ತಿರುವಾಗ ಆರೋಪಿತರಾದ ನೀವೆಲ್ಲರೂ ಅಪರಾಧ ಮಾಡುವ ಏಕೋದ್ದೇಶದಿಂದ, ಪಿರ್ಯಾದಿಯನ್ನು ಉದ್ದೇಶಿಸಿ ನೀನು ಇಲ್ಲಿ ಯಾಕೆ ಕೆಲಸ ಮಾಡುತ್ತಾ ಇದ್ದಿಯಾ ಇದು ನಮ್ಮ ಜಮೀನು ಅಂತಾ ಹೇಳಿ ಕಲ್ಲಿನಿಂದ ಬೆನ್ನಿನ ಮೇಲೆ ಹೊಡೆದಿದ್ದು, 5 ನೇ ಆರೋಪಿಯು ಕಟ್ಟಿಗೆ ಕೋಲಿನಿಂದ ಪಿರ್ಯಾದಿಯ ಬಲಕಾಲಿನ ಮೇಲೆ ಸ್ವಇಚ್ಚೆಯಿಂದ ಹೊಡೆದು ತೀವ್ರ ಸ್ವರೂಪದ ಗಾಯ ನೋವುಪಡಿಸಿದ್ದು, ಈ ಮೂಲಕ

ಆರೋಪಿತರಾದ ನೀವೆಲ್ಲರೂ **ಭಾರತೀಯ ನ್ಯಾಯ ಸಂಹಿತೆ ಕಲಂ.** 118(1) **ಸಹಿತ** 190 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರೆಂದು ಆರೋಪಿಸಲಾಗಿದೆ.

ಎರಡನೇಯದಾಗಿ ಈ ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ, ಆರೋಪಿತರಾದ ನೀವೆಲ್ಲರೂ ಅಪರಾಧ ಮಾಡುವ ಏಕೋದ್ದೇಶದಿಂದ, ಪಿರ್ಯಾದಿಯವರನ್ನು ಕೆಳಗೆ ಹಾಕಿ ಕಾಲಿನಿಂದ ಸ್ವಇಚ್ಛೆಯಿಂದ ತುಳಿದು ಗಾಯ ನೋವುಪಡಿಸಿದ್ದು, ಈ ಮೂಲಕ ಆರೋಪಿಯಾದ ನಿವೇಲ್ಲರೂ **ಭಾರತೀಯ ನ್ಯಾಯ ಸಂಹಿತೆ ಕಲಂ.** 115(2) **ಸಹಿತ** 190 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರೆಂದು ಆರೋಪಿಸಲಾಗಿದೆ.

ಪ್ರಶ್ನೆ1 : ಈಗ ನಿಮಗೆ ಓದಿ ಹೇಳಿದ ಆರೋಪಣೆ ತಿಳಿಯಿತೆ?

1 ರಿಂದ 5 ನೇ ಆರೋಪಿತರ ಉತ್ತರ: ತಿಳಿಯಿತು

ಪ್ರಶ್ನೆ 2 : ಸದ್ರಿ ಆರೋಪಣೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೇ ?

1 ರಿಂದ 5 ನೇ ಆರೋಪಿತರ ಉತ್ತರ: ವಿಚಾರಣೆಯಾಗಬೇಕು

(ಈ ಮೂಲಕ ಪ್ರಮಾಣಿಸುವುದೇನೆಂದರೆ ಆರೋಪಿತರು ಕೊಟ್ಟಂತ ಹೇಳಿಕೆಯ ಉತ್ತರವನ್ನು ಪಡೆಯಲಾಗಿದೆ)

**ಸಹಿ ಇದೆ/-**

**ದಿನಾಂಕಃ**- 03-07-2025.

**(ಅನಿಲ್ ಜೋನ್ ಸಿಕ್ವೇರಾ)**
**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಮ್.ಎಫ್.ಸಿ., ನ್ಯಾಯಾಲಯ, ಹೊನ್ನಾವರ.**

1 ನೇ ಆರೋಪಿಯ ಸಹಿಃ- ಸಹಿ ಇದೆ

2 ನೇ ಆರೋಪಿಯ ಸಹಿಃ- ಸಹಿ ಇದೆ

3 ನೇ ಆರೋಪಿಯ ಸಹಿಃ- ಸಹಿ ಇದೆ

4 ನೇ ಆರೋಪಿಯ ಸಹಿಃ- ಸಹಿ ಇದೆ

5 ನೇ ಆರೋಪಿಯ ಸಹಿಃ- ಸಹಿ ಇದೆ

*****